**ಓ ಎಸ್ ನಂಃ 98/2017**
**ಡಿ ಡಬ್ಲ್ಯೂ ಃ 2**

**ದಿಃ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ 1 ರಿಂದ 4 ಪರ ಶ್ರೀ. ಎಲ್ ಪಿ ಎಸ್ ವಕೀಲರಿಂದಃ-**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಆರ್ ವಕೀಲರಿಂದಃ-**

ಪ್ರತಿವಾದಿಗಳು ನನಗೆ ಸುಮಾರು 50 ವರ್ಷಗಳಿಂದ ಪರಿಚಯ ಇರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ತಾವು ಯಾವಾಗ ಜನಿಸಿದ್ದೀರಿ ಎಂದರೆ ನನಗೆ ಗೊತ್ತಿಲ್ಲ ಆದರೆ ನನಗೆ ಈಗ 59 ವರ್ಷ. 1965 ನೇ ಇಸವಿಯಲ್ಲಿ ಈ ದಾವೆಯ ಪಕ್ಷಗಾರರ ನಡುವೆ ವಿಭಾಗ ಆಗಿದೆ ಎಂದು ಹೇಳಿದ್ದೀರಿ ಆ ಸಮಯದಲ್ಲಿ ತಾವು ಜನಿಸಿದ್ದೀರ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಿಭಾಗ ಆಗಿದೆ ಎಂದು ನನಗೆ ಹನುಮಂತಯ್ಯನವರು ತಿಳಿಸಿರುತ್ತಾರೆ. ವಾದಿಗಳು ಮತ್ತು ಪ್ರತಿವಾದಗಳ ನಡುವೆ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಿಭಾಗ ಆಗಿಲ್ಲದಿದ್ದರೂ ಸಹ ತಾವು ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**

**ಓ ಎಸ್ ನಂಃ 98/2017**
**ಡಿ ಡಬ್ಲ್ಯೂ ಃ 1**

**ದಿಃ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಆರ್ ವಕೀಲರಿಂದಃ-**

1965 ನೇ ಸಾಲಿನಲ್ಲಿ ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಿಭಾಗ ಆಗಿದೆ ಎಂದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಿ, ಆ ಸಮಯದಲ್ಲಿ ತಾವು ಜನಿಸಿರಲಿಲ್ಲ ಎಂದರೆ ಸರಿ. ಉಳಿಕೆ ಪ್ರತಿವಾದಿಗಳು ಸಹ 1965 ನೇ ಸಾಲಿಗಿಂತ ಪೂರ್ವದಲ್ಲಿ ಜನಿಸಿರಲಿಲ್ಲ ಎಂದರೆ ಸಾಕ್ಷಿ 1ನೇ ಪ್ರತಿವಾದಿ ಮಾತ್ರ ಜನಿಸಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹುಟ್ಟಿದ ದಿನಾಂಕವನ್ನು ತೋರಿಸಲು ಅವರ ಜನ್ಮ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರ ಎಂದರೆ ಸಾಕ್ಷಿಯು ಜನ್ಮ ಪ್ರಮಾಣ ಪತ್ರವನ್ನು ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಜಯಮ್ಮನವರು ತಮ್ಮ ತಂದೆಯವರನ್ನು ಯಾವಾಗ ಮದುವೆ ಆಗಿದ್ದರು ಎಂದರೆ ಸಾಕ್ಷಿಯು 1960 ನೇ ಸಾಲಿನಲ್ಲಿ ಎಂದು ನುಡಿಯುತ್ತಾರೆ. ಜಯಮ್ಮ ನವರು ತಮ್ಮ ತಂದೆಯವರನ್ನು 1960 ನೇ ಸಾಲಿನಲ್ಲಿ ಮದುವೆ ಆಗಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತೀರ ಎಂದರೆ ಸಾಕ್ಷಿಯು ಆ ಸಮಯದ ಯಾವುದೇ ದಾಖಲಾತಿಗಳು ನಮ್ಮ ಬಳಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮದುವೆ 1960 ನೇ ಸಾಲಿನಲ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1965 ನೇ ಸಾಲಿನಲ್ಲಿ ವಿಭಾಗ ಆಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ವಿಭಾಗ ಪತ್ರವನ್ನು ನೋಡಿರುತ್ತೇನೆ ಸದರಿ ವಿಭಾಗ ಪತ್ರವು ಈಗ ನಮ್ಮ ಮನೆಯಲ್ಲಿ ಇದೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

ತಮ್ಮ ಪ್ರಕಾರ ವಿಭಾಗ ಯಾರ ನಡುವೆ ಆಗಿದೆ ಎಂದರೆ ಸಾಕ್ಷಿಯು ನಮ್ಮ ತಂದೆ ಹಾಗೂ ಅವರ ಸಹೋದರರ ನಡುವೆ ವಿಭಾಗ ಆಗಿದೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರ ತಂದೆಯವರ ಹೆಸರು ಚಿಕ್ಕಣ್ಣ. ಚಿಕ್ಕಣ್ಣನವರು 1981 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ದಾವಾ ಸ್ವತ್ತುಗಳು ಮುಲತಃ ಚಿಕ್ಕಣ್ಣನವರಿಗೆ ಸೇರಿದ ಸ್ವತ್ತುಗಳು. ದಾವಾ ಸ್ವತ್ತುಗಳು ಚಿಕ್ಕಣ್ಣ ನವರಿಗೆ ಸೇರಿದ್ದು ಎಂದು ವಿಭಾಗ ಪತ್ರದಲ್ಲಿ ನಮೂದಾಗಿದೆಯಾ ಎಂದರೆ ನನಗೆ ಗೊತ್ತಿಲ್ಲ.

ಓ ಎಸ್ ನಂಃ 98/2017
ಡಿ ಡಬ್ಲ್ಯೂ ಃ 1

ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಪತ್ರ ಆಗಿರುವುದಿಲ್ಲ ಆದ ಕಾರಣ ತಾವು ಎಲ್ಲಾ ಪ್ರಶ್ನೆಗಳಿಗೆ ತಾವು ಗೊತ್ತಿಲ್ಲ ಎಂದು ಉತ್ತರ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ತಮ್ಮ ತಂದೆಯವರಿಗೆ 5 ಮತ್ತು 6 ನೇ ಪ್ರತಿವಾದಿಗಳು ಅವರ ಸಹೋದರಿಯರು ಎಂದರೆ ಸರಿ. ತಿಮ್ಮಯ್ಯನವರು ಕೆಲವೊಂದು ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದು ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದೀರಿ ಅವುಗಳಲ್ಲಿ ವಿಭಾಗ ಆಗಿದೆ ಎಂದು ನಮೂದಾಗಿದೆ ಅದು ಯಾರ ಆಧಾರದ ಮೇರೆಗೆ ತಿಮ್ಮಯ್ಯನವರು ಬರೆಸಿದ್ದಾರೆ ಎಂದರೆ ಸಾಕ್ಷಿಯು 1965 ರಲ್ಲಿ ವಿಭಾಗ ಆಗಿದೆ ಎಂದು ನುಡಿಯುತ್ತಾರೆ. ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಿಭಾಗ ಆಗಿಲ್ಲದಿದ್ದರೂ ಸಹ ತಾವು ತಪ್ಪು ಮಾಹಿತಿ ನೀಡಿ ವಿಭಾಗ ಆಗಿದೆ ಎಂದು ದಾಖಲಾತಿಗಳಲ್ಲಿ ನಮೂದು ಮಾಡಿಸಿದ್ದೀರಿ ಎಂದರೆ ಸರಿಯಲ್ಲ. ಕೆಲವೊಂದು ಸ್ವತ್ತುಗಳನ್ನು ತಮ್ಮ ತಂದೆಯವರು ಅವರ ಹಣದ ಅವಶ್ಯಕತೆಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ತಿಮ್ಮಯ್ಯನವರು ಅವರಿಗೆ ಹಣದ ಅವಶ್ಯಕತೆ ಇರುವ ಕಾರಣ ಕೆಲವೊಂದು ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಪ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**